ಕರ್ನಾಟಕ ವಿಧಾನ ಪರಿಷತ್ತು

1.	ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	79 (605)
2.	ಸದಸ್ಯರ ಹೆಸರು	:	ಶ್ರೀ ರಘುನಾಥ್ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು)
3.	ಉತ್ತರಿಸಬೇಕಾದ ದಿನಾಂಕ	:	10-03-2020
4.	ಉತ್ತರಿಸುವ ಸಚಿವರು	:	ಮಾನ್ಯ ನಗರಾಭಿವೃದ್ಧಿ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರಗಳು
ಅ)	ಬೀದರ್ ಜಿಲ್ಲೆ, ಬೀದರ್ ತಾಲ್ಲೂಕಿನಲ್ಲಿ ಬರುವ ಗೋರನಳ್ಳಿ ಗ್ರಾಮದಲ್ಲಿ ಕೊಳಚೆ ಶುದ್ಧೀಕರಣ ಘಟಕ (ಎಸ್.ಟಿ.ಪಿ)ದ ಕಾಮಗಾರಿಯು ಯಾವಾಗ ಪ್ರಾರಂಭಗೊಂಡಿದೆ; ಇದಕ್ಕಾಗಿ ಸರ್ಕಾರದಿಂದ ಮಂಜೂರಾದ ಅನುದಾನದ ಮೊತ್ತವೆಷ್ಟು; ಈವರೆಗೆ ಇದಕ್ಕಾಗಿ ಬಿಡುಗಡೆಯಾದ ಅನುದಾನವೆಷ್ಟು; (ಸ್ಪಷ್ಟ ಮಾಹಿತಿ ನೀಡುವುದು)	**ಕೆ.ಯು.ಐ.ಡಿ.ಎಫ್.ಸಿ ವತಿಯಿಂದ** ಏಷ್ಯನ್ ಅಭಿವೃದ್ಧಿ ಬ್ಯಾಂಕ್ ನೆರವಿನ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮದಡಿಯಲ್ಲಿ (ಎನ್‌ಕೆಯುಎಸ್‌ಐಪಿ) ಬೀದರ್ ನಗರದಲ್ಲಿ ಒಳಚರಂಡಿ ಜಾಲ ಅಳವಡಿಕೆ ಹಾಗೂ ತ್ಯಾಜ್ಯ ನೀರು ಸಂಸ್ಕರಣ ಘಟಕ ಬೀದರ್ ತಾಲ್ಲೂಕು ಗೋರನಳ್ಳಿ ಗ್ರಾಮದಲ್ಲಿ ನಿರ್ಮಾಣ (ಪ್ಯಾಕೇಜ್ ಸಂಖ್ಯೆ: 02ಬಿಡಿಆರ್02) ಕಾಮಗಾರಿ ದಿನಾಂಕ 22/07/2011 ರಂದು ಪ್ರಾರಂಭಿಸಲಾಗಿದೆ. ಈ ಕಾಮಗಾರಿಗೆ ಒಟ್ಟು ರೂ.39.80 ಕೋಟಿ ಮಂಜೂರಾಗಿದೆ. ಈ ವರೆಗೆ ರೂ.35.18 ಕೋಟಿಗಳು ಅನುದಾನ ವೆಚ್ಚಮಾಡಲಾಗಿದೆ. ಘಟಕವು ಪೂರ್ಣಗೊಂಡಿದೆ. **ಕ.ನ.ನೀ.ಸ ಮತ್ತು ಒಚ ಮಂಡಳ ವತಿಯಿಂದ** ಕೇಂದ್ರ ಪುರಸ್ಕೃತ ಅಮೃತ್ ಯೋಜನೆಯಡಿ ಗೋರನಳ್ಳಿ ಗ್ರಾಮದಲ್ಲಿ 17.26 ಎಂ.ಎಲ್.ಡಿ ಸಾಮರ್ಥ್ಯದ ಮಲಿನ ನೀರು ಸಂಸ್ಕರಣಾ ಘಟಕ (ಎಸ್.ಟಿ.ಪಿ) ದ ಕಾಮಗಾರಿಯನ್ನು ಅಕ್ಟೋಬರ್ 2016 ರಲ್ಲಿ ಪ್ರಾರಂಭಿಸಲಾಗಿದೆ, ಕಾಮಗಾರಿಗಳು ಶೇ.98 ರಷ್ಟು ಪೂರ್ಣಗೊಂಡಿದ್ದು, ಡಿಸೆಂಬರ್-2019 ರಿಂದ ಪ್ರಾಯೋಗಿಕವಾಗಿ ಚಾಲನೆಗೊಳಿಸಲಾಗಿದೆ. ಬಾಕಿ ಕಾಮಗಾರಿಗಳನ್ನು ಮಾರ್ಚ್-2020 ರೊಳಗಾಗಿ ಪೂರ್ಣಗೊಳಿಸಲಾಗುವುದು. ಬೀದರ್ ನಗರ ವಲಯ-2 ರ ಒಳಚರಂಡಿ ಯೋಜನೆಯ ಮಂಜೂರಾದ ಮೊತ್ತ ರೂ.116.00 ಕೋಟಿಗಳು, ಇಲ್ಲಿಯವರೆಗೂ ರೂ.74.52 ಕೋಟಿಗಳ ಅನುದಾನ ಬಿಡುಗಡೆಯಾಗಿರುತ್ತದೆ.
ಆ)	ಈ ಕಾಮಗಾರಿಯ ಗುಣಮಟ್ಟವನ್ನು ಸರಿಯಾಗಿ ಪರೀಕ್ಷಿಸಲಾಗಿದೆಯೇ; ಹಾಗಿದ್ದಲ್ಲಿ, ಇದನ್ನು ಯಾವ ರೀತಿಯಲ್ಲಿ ಯಾವಾಗ ಯಾವ ಸಂಸ್ಥೆಯಿಂದ ಕೈಗೊಳ್ಳಲಾಯಿತು; ಈ ಕಾಮಗಾರಿಯನ್ನು ಯಾವ ವ್ಯಕ್ತಿ / ಸಂಸ್ಥೆಗೆ ನೀಡಲಾಗಿರುತ್ತದೆ; (ಸ್ಪಷ್ಟ ವಿವರ ನೀಡುವುದು)	**ಕೆ.ಯು.ಐ.ಡಿ.ಎಫ್.ಸಿ ವತಿಯಿಂದ** ಈ ಕಾಮಗಾರಿಯ ಗುಣಮಟ್ಟವನ್ನು ಸರಿಯಾಗಿ ಪರೀಕ್ಷಿಸಿದೆ. ಕಾಮಗಾರಿ ಗುಣಮಟ್ಟವನ್ನು ಐಎಸ್ ಮಾನದಂಡದಲ್ಲಿ ನಿಗಧಿಪಡಿಸಿರುವ ಅಂಶಗಳಂತೆ ಆಗಿಂದಾಗ್ಗೆ ಕೆಯುಐಡಿಎಫ್‌ಸಿ ಸಂಸ್ಥೆಯಿಂದ ನೇಮಿಸಲ್ಪಟ್ಟ ಸಮಾಲೋಚಕರಾದ ಮೆ//ಹೆಸ್ಕೊನಿಂಗ್ ಡಿಹೆಚ್‌ವಿ ಕನ್ಸಲ್ಟಿಂಗ್ ಇಂಡಿಯಾ ಲಿ. ರವರು ಜುಲೈ 2011 ರಿಂದ ಜೂನ್ 2017 ಹಾಗೂ ಮೆ//ಎಸ್‌ಟಿಇಎಂ -ಸೆಂಟರ್ ಫಾರ್ ಸಿಂಬಯಾಸಿಸ್ ಆಫ್ ಟೆಕ್ನೋಲಜಿ, ಎನ್ವಿರಾನ್ಮೆಂಟ್ ಮ್ಯಾನೇಜೆಮೆಂಟ್ ರವರಿಗೆ ಆಗಸ್ಟ್ 2017 ರಿಂದ ಮೇ 2019 ರವರೆಗೆ ನಿಯಮಿತವಾಗಿ ಕಾಮಗಾರಿಯ ಗುಣಮಟ್ಟವನ್ನು ಪರಿಶೀಲಿಸಿರುತ್ತಾರೆ.

ಕ್ರ. ಸಂ.	ಪ್ರಶ್ನೆ	ಉತ್ತರಗಳು
		ಈ ಕಾಮಗಾರಿಗೆ ಉಪಯೋಗಿಸಿರುವ ಸಾಮಗ್ರಿಗಳಾದ ಮರಳು, ಸೂಕ್ತ ಮಣ್ಣು. ಜಲ್ಲಿ, ಸಿಮೆಂಟ್ ಮತ್ತು ಕಬ್ಬಿಣದ ಗುಣಮಟ್ಟವನ್ನು ಪರಿಶೀಲಿಸಿ ಐಎಸ್‌ಐ ನಲ್ಲಿ ನಿಗಧಿಪಡಿಸಿರುವ ಅಂಶಗಳಿಗೆ ತಾಳೆಯಾದ ಮೇಲೆ ಈ ಸಾಮಗ್ರಿಗಳನ್ನು ಉಪಯೋಗಿಸಿ ಕೆಲಸ ನಿರ್ವಹಿಸಿದೆ.ಈ ಕಾಮಗಾರಿಯನ್ನು ಮೆ//ಅಯ್ಯಪ್ಪಾ ಇನ್ಫ್ರಾ ಪ್ರಾಜೆಕ್ಟ್‌ಸ್ ಮತ್ತು ಮೆ// ಮೇಘಾ ಇನ್ಫ್ರಾಸ್ಟ್ರಕ್ಚರಸ್ (ಜಿ.ವಿ) ಹೈದರಾಬಾದ್ ಇವರಿಗೆ ದಿ:22/07/2011 ರಂದು ಗುತ್ತಿಗೆ ನೀಡಲಾಗಿದೆ. **ಕ.ನ.ನೀ.ಸ ಮತ್ತು ಒಚ ಮಂಡಳಿ ವತಿಯಿಂದ** ಕೈಗೊಂಡಿರುವ ಕಾಮಗಾರಿಗಳ ಗುಣಮಟ್ಟವನ್ನು ಒಟ್ಟು ಮೂರು ಹಂತದಲ್ಲಿ ಪರಿಶೀಲಿಸಲಾಗುತ್ತಿದೆ. 1) ಕಾಮಗಾರಿಗೆ ಅವಶ್ಯಕವಿರುವ ಒಳಚರಂಡಿ ಕೊಳವೆ, ಆಳುಗುಂಡಿಗಳ ಫ್ರೇಮ್ ಮತ್ತು ಕವರ್ಸ್, ಯಂತ್ರೋಪಕರಣಗಳು ಇತ್ಯಾದಿ ಸಾಮಗ್ರಿಗಳನ್ನು ತಯಾರಿಸುವ ಹಂತದಲ್ಲಿಯೇ ತಯಾರಿಕೆ ಘಟಕದಲ್ಲಿಯೇ ಮೂರನೇ ವ್ಯಕ್ತಿಯಿಂದ ಗುಣಮಟ್ಟವನ್ನು ಪರೀಕ್ಷೆ ಮಾಡಿಸಲಾಗುತ್ತಿದೆ. 2) ಕಾಮಗಾರಿಗೆ ಅವಶ್ಯಕವಿರುವ ಇಟ್ಟಿಗೆ, ಮರಳು, ಜೆಲ್ಲಿ, ಸಿಮೆಂಟ್, ಸ್ಟೀಲ್ ಇತ್ಯಾದಿ ಕಚ್ಚಾ ಸಾಮಗ್ರಿಗಳನ್ನು ಸ್ಥಳೀಯ ಇಂಜಿನಿಯರಿಂಗ್ ಕಾಲೇಜಿನಲ್ಲಿ ಕಾಲಕಾಲಕ್ಕೆ ಪರೀಕ್ಷೆಗೆ ಒಳಪಡಿಸಿ, ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. 3) ಕಾಮಗಾರಿ ನಡೆಯುವ ಸ್ಥಳದಲ್ಲಿ, Concrete Cube Strength, Slump Test, ಇತ್ಯಾದಿ ಪರೀಕ್ಷೆಗಳನ್ನು ಕೈಗೊಳ್ಳಲಾಗುತ್ತಿದೆ. ಮಂಡಳಿ ಇಂಜಿನಿಯರುಗಳು ಅಲ್ಲದೇ, ಮಂಡಳಿ ವತಿಯಿಂದ ಕೈಗೊಂಡಿರುವ ಕಾಮಗಾರಿಗಳ ಗುಣಮಟ್ಟ ಮತ್ತು ಮೂರನೇ ವ್ಯಕ್ತಿ ತಪಾಸಣೆಗಾಗಿ ಮೆ: ಐ.ಪಿ.ಇ ಗ್ಲೋಬಲ್ ಲಿ, ನವದೆಹಲಿ (ಪಿ.ಡಿ.ಎಮ್.ಸಿ) ಇವರನ್ನು ಗುತ್ತಿಗೆ ಮುಖಾಂತರ ರಾಜ್ಯದ ಎಲ್ಲಾ ಅಮೃತ ಯೋಜನೆಗಳಿಗೆ ನೇಮಿಸಲಾಗಿದ್ದು ಗುತ್ತಿಗೆ ಮೊತ್ತ ರೂ.66.57 ಕೋಟಿಗಳು ಆಗಿರುತ್ತದೆ.
ಇ)	ಈ ಕೊಳಚೆ ಶುದ್ಧೀಕರಣ ಘಟಕದಿಂದ ಸುತ್ತ ಮುತ್ತಲಿನ ಗ್ರಾಮಗಳಲ್ಲಿನ ಬಾವಿ, ಬೋರ್‌ವೆಲ್‌ಗಳಲ್ಲಿನ ಅಂತರ್ಜಲ ಕಲುಷಿತಗೊಂಡು ಇದರಿಂದ ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಿರುವುದು ಹಾಗೂ ಅಕ್ಕಪಕ್ಕದ ಜಮೀನಿನಲ್ಲಿ ಬೆಳೆದ ಬೆಳೆಗಳು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು;	**ಕೆ.ಯು.ಐ.ಡಿ.ಎಫ್.ಸಿ ವತಿಯಿಂದ** ಎಸ್‌ಟಿಪಿ ಘಟಕದ ತಳವನ್ನು ಬಿ.ಸಿ ಬ್ಲಾಂಕೆಟ್‌ನಿಂದ ಭದ್ರಪಡಿಸಿದ ಮೇಲೆ ತ್ಯಾಜ್ಯ ನೀರನ್ನು ತುಂಬಲಾಯಿತು. ತ್ಯಾಜ್ಯ ನೀರು ಸಂಸ್ಕರಣ ಘಟಕದಿಂದ ನೀರು ಸೋರಿಕೆಯಾಗಿ ತೆರೆದ ಬಾವಿ ಹಾಗೂ ಕೊಳವೆ ಬಾವಿಗಳ ನೀರು ಮಲಿನವಾಗಿರುತ್ತದೆ ಎಂದು ಸ್ಥಳೀಯ ಸುದ್ದಿ ಮಾಧ್ಯಮಗಳಲ್ಲಿ ವರದಿಯಾಗಿತ್ತು. ತಕ್ಷಣ ಜಲ ತ್ಯಾಜ್ಯ ಘಟಕಕ್ಕೆ ಬಿಡುತ್ತಿದ್ದ ಜಲ ತ್ಯಾಜ್ಯವನ್ನು ಸ್ಥಗಿತಗೊಳಿಸಲಾಯಿತು. ಎಸ್‌ಟಿಪಿ ಘಟಕದ ಪ್ರದೇಶವು ಲ್ಯಾಟರೈಟ್ ಮಾದರಿಯ ಮಣ್ಣಾದುದರಿಂದ, ಘಟಕದ ತಳವನ್ನು ಬಿ.ಸಿ ಬ್ಲಾಂಕೆಟ್‌ನಿಂದ ಭದ್ರಪಡಿಸಿದ್ದಾಗ್ಯೂ ಕೊಳಚೆ ನೀರು ಸೋರಿಕೆಯಾಗುತ್ತಿರುವುದು ಕಂಡುಬಂದಿದೆ. ಮಣ್ಣಿನ ತಜ್ಞರ ಅಭಿಪ್ರಾಯದಂತೆ ಮಣ್ಣಿನ ಗುಣ ಲಕ್ಷಣವನ್ನು ಪರಿಕ್ಷಿಸಿ ಸೋರುವಿಕೆಯ ದೋಷವನ್ನು ನಿವಾರಣೆಮಾಡಲು ಕ್ರಮ ವಹಿಸಲಾಗಿದೆ.

ಕ್ರ. ಸಂ.	ಪ್ರಶ್ನೆ	ಉತ್ತರಗಳು
		ಹಾಲಿ ಬೀದರ್ ನಗರದ ತ್ಯಾಜ್ಯ ನೀರನ್ನು ಅಮೃತ್ ಯೋಜನೆಯಲ್ಲಿ ನಿರ್ಮಿಸಿರುವ ಎಸ್‌ಟಿಪಿ ಘಟಕದಿಂದ ಸಂಸ್ಕರಿಸಲಾಗುತ್ತಿದೆ. ಘಟಕದ ತಳವು ಭದ್ರವಾಗಿ ಸೋರಿಕೆಯು ನಿಂತ ಮೇಲೆ ಎಸ್‌ಟಿಪಿ ಘಟಕವನ್ನು ಉಪಯೋಗಿಸಲಾಗುವುದು. **ಕ.ನ.ನೀ.ಸ ಮತ್ತು ಒಚ ಮಂಡಳಿ ವತಿಯಿಂದ** ನಿರ್ಮಾಣವಾಗಿರುವ ಮಲಿನ ನೀರು ಸಂಸ್ಕರಣಾ ಘಟಕವನ್ನು ತಳಪಾಯಕ್ಕೂ ಕಾಂಕ್ರಿಟ್ ಹಾಕಿ ನಿರ್ಮಿಸಿರುವದರಿಂದ, ಮಾಲಿನ್ಯದ ಪ್ರಶ್ನೆ ಉದ್ಭವಿಸುವುದಿಲ್ಲ.
ಈ)	ಸುಳ್ಳು ಮಾಹಿತಿಯನ್ನು ನೀಡುತ್ತಿರುವ ಬೀದರ್ ಜಿಲ್ಲೆಯ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು (ಸಂಪೂರ್ಣ ಮಾಹಿತಿ ನೀಡುವುದು)	ಯಾವುದೇ ಸುಳ್ಳು ಮಾಹಿತಿ ನೀಡಿರುವುದಿಲ್ಲ. ಹಾಗೂ ಎಲ್ಲಾ ಅಧಿಕಾರಿಗಳಿಗೆ ವಾಸ್ತವಿಕ ಹಾಗೂ ಸತ್ಯವಾದ ಮಾಹಿತಿಯನ್ನು ಮಾತ್ರ ನೀಡಬೇಕೆಂದು ಕಾಲಕಾಲಕ್ಕೆ ಸೂಚಿಸಲಾಗಿದೆ.

ನಅಇ 66 ಪಿ.ಆರ್.ಜೆ 2020

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು.